ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶ್ರೀರಂಗಪಟ್ಟಣ

ಸಿಸಿಃ ನಂಃ **1112/2021**

ಪಿ.ಡಬ್ಲ್ಯೂಃ **09**

ಸಿ.ಡಬ್ಲ್ಯೂಃ **11**

| | |
|---|---|
| ಸಾಕ್ಷಿಯ ಹೆಸರು | ಸಿದ್ದೇಗೌಡ |
| ತಂದೆ/ಗಂಡನ ಹೆಸರು | ಲೇ.ಚೆನ್ನಯ್ಯ |
| ವಯಸ್ಸು | 64 ವರ್ಷ |
| ಉದ್ಯೋಗ | ನಿವೃತ್ತ ಎ.ಎಸ್.ಐ |
| ವಿಳಾಸ | ಮಂಡ್ಯ |

ಸಾಕ್ಷಿಗೆ ದಿನಾಂಕ **21.11.2025** ರಂದು ಪ್ರಮಾಣವಚನ ನೀಡಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ ಸ ಅ ರವರಿಂದಃ

ನಾನು ಅಕ್ಟೋಬರ್ **2019** ರಿಂದ ಏಪ್ರಿಲ್ **2021** ರವರೆಗೆ ಶ್ರೀರಂಗಪಟ್ಟಣ ಟೌನ್ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. **02.04.2021** ರಂದು ಸಂಜೆ **7.30** ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾ ಸಾ **1** ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಮೊ.ಸಂಖ್ಯೆ **64/2021** ರಂತೆ ಕಲಂ **279, 337** ಐ.ಪಿ.ಸಿ ರೀತ್ಯಾ ಪ್ರಕರಣವನ್ನು ದಾಖಲಿಸಿ ಪ್ರ.ವ.ವರದಿಯನ್ನು ನ್ಯಾ.ಕ್ಕೆ ನಿವೇದಿಸಿಕೊಂಡಿರುತ್ತೇನೆ.

ಅದೇ ದಿನ ಚಾ ಸಾ **2** ಮತ್ತು **3** ರವರಿಗೆ ನೋಟೀಸ್ ಜಾರಿ ಮಾಡಿ ಅವರನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ರಾತ್ರಿ **8.30-9.15** ರವರೆಗೆ ಚಾ ಸಾ **1** ರವರು ಸ್ಥಳ ತೋರಿಸಿದ ಮೇರೆಗೆ ಮಹಜರ್ ಕ್ರಮ ಜರುಗಿಸಿರುತ್ತೇವೆ. ನಂತರ ಕೃತ್ಯ ನಡೆದ ಸ್ಥಳದ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇನೆ. ಕೃತ್ಯಕ್ಕೆ ಸಂಬಂಧಿಸಿದ ಕೆ.ಎಸ್.ಆರ್.ಟಿ.ಸಿ ನಂ.ಕೆಎ**-11-**ಎಫ್**-0414** ಹಾಗೂ ಕಾರ್ ನಂ.ಕೆಎ**-11-**ಎಂ**.8876** ಹುಂಡೈ ಹೈ**-20** ಕಾರನ್ನು ಅಮಾನತ್ತುಪಡಿಸಿಕೊಂಡು ಛಾಯಚಿತ್ರ ತೆಗೆಸಿರುತ್ತೇನೆ. ದಿ**.03.04.2021** ರಂದು ಸಾಕ್ಷಿದಾರರಾದ ಚಾ ಸಾ **4** ರಿಂದ **6** ರವರ ಹೇಳಿಕೆ ಹಾಗೂ ಮುಚ್ಚಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇದಿನ ಚಾ ಸಾ **7** ರವರು ಅಧಿಕಾರ ಪತ್ರ ಪಡೆದು ಮತ್ತು ಬಸ್ಸಿನ ದಾಖಲಾತಿಗಳನ್ನು ಪಡೆದು, ಆರೋಪಿಯ ಹಾಜರಾತಿ

ದೃಢೀಕರಣ ಪತ್ರವನ್ನು ಪಡೆದು ತಂದು ಹಾಜರುಪಡಿಸಿದ್ದು ಅದರಂತೆ ಚಾ ಸಾ 7 ರವರಿಗೆ ಕಲಂ 133 ಐ.ಎಂ.ವಿ ರೀತ್ಯಾ ನೋಟೀಸ್ ನೀಡಿ ಪ್ರತ್ಯುತ್ತರವನ್ನು ಪಡೆದಿರುತ್ತೇನೆ. ನಂತರ ಆರೋಪಿಗೆ 41(ಎ) ರೀತ್ಯಾ ನೋಟೀಸ್ ಜಾರಿ ಮಾಡಿ ಬಂಧನಕ್ರಮ ಅನುಸರಿಸಿ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ. ಅದೇದಿನ ಚಾ ಸಾ 9 ರವರಿಗೆ ವಶಪಡಿಸಿಕೊಂಡ ವಾಹನಗಳನ್ನು ತಪಾಸಣೆ ಮಾಡಿ ಐ.ಎಂ.ವಿ ವರದಿಯನ್ನು ನೀಡಿಲು ಮನವಿಯನ್ನು ನೀಡಿರುತ್ತೇನೆ. ಅದೇದಿನ ಚಾ ಸಾ 8 ರವರಿಂದ ಕೆಎ-11-ಎಂ.8876 ಕಾರಿಗೆ ಸಂಬಂಧಪಟ್ಟ ನಷ್ಟಭರ್ತಿ ಮುಚ್ಚಳಿಕೆ ಪತ್ರವನ್ನು ಪಡೆದು ಸದರಿ ಕಾರನ್ನು ಚಾ ಸಾ 8 ರವರ ವಶಕ್ಕೆ ನೀಡಿರುತ್ತೇನೆ. ಅದೇದಿನ ಚಾ ಸಾ 7 ರವರಿಂದ ಕೆ.ಎಸ್.ಆರ್.ಟಿ.ಸಿ ಬಸ್ ಗೆ ಸಂಬಂಧಪಟ್ಟ ನಷ್ಟಭರ್ತಿ ಮುಚ್ಚಳಿಕೆ ಪತ್ರವನ್ನು ಪಡೆದು ಸದರಿ ಬಸ್ಸನ್ನು ಚಾ ಸಾ 7 ರವರ ವಶಕ್ಕೆ ನೀಡಿರುತ್ತೇನೆ.

ಸಾಕ್ಷಿಗೆ ನಿಪಿ 1 ನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1 ಬಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ 2 ನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 2 ಡಿ ಎಂದು ಗುರುತಿಸಲಾಯಿತು. ನಿಪಿ 4 ರಿಂದ 7 ರಲ್ಲಿರುವ ವಾಹನದ ಛಾಯಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ನಿಪಿ 9 ನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 9 ಬಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ 10 ನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 10 ಬಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ 11 ನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 11 ಬಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ 12 ನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 12 ಬಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರ.ವ.ವರದಿಯನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು ಪ್ರ.ವ.ವರದಿಯನ್ನು ನಿಪಿ 16 ಎಂದು, ಸಾಕ್ಷಿಯ ಸಹಿಯನ್ನು ನಿಪಿ 16 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಾರ್ಗಪತ್ರವನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು ಮಾರ್ಗಪತ್ರವನ್ನು ನಿಪಿ 17 ಎಂದು, ಸಾಕ್ಷಿಯ ಸಹಿಯನ್ನು ನಿಪಿ 17 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ **Fitness certificate** ನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು **Fitness certificate** ನ್ನು ನಿಪಿ 18 ಎಂದು, ಸಾಕ್ಷಿಯ ಸಹಿಯನ್ನು ನಿಪಿ 18 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಮೂನೆ-53 ನ್ನು ತೋರಿಸಲಾಗಿ

ಸಾಕ್ಷಿ ನೋಡಿ ಗುರುತಿಸಿದ್ದುನಮೂನೆ-53 ನ್ನು ನಿಪಿ 19 ಎಂದು, ಸಾಕ್ಷಿಯ ಸಹಿಯನ್ನು ನಿಪಿ 19 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಹಾಜರಾತಿ ದೃಡೀಕರಣ ಪತ್ರವನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು ಹಾಜರಾತಿ ದೃಡೀಕರಣ ಪತ್ರವನ್ನು ನಿಪಿ 20 ಎಂದು, ಸಾಕ್ಷಿಯ ಸಹಿಯನ್ನು ನಿಪಿ 20 ಎ ಎಂದು ಗುರುತಿಸಲಾಯಿತು. ವಾಹನ ಸಂಖ್ಯೆ ಕೆಎ-11-ಎಂ-8876 ಕಾರಿನ ನಷ್ಟಭರ್ತಿ ಬಾಂಡನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು ನಷ್ಟಭರ್ತಿ ಬಾಂಡನ್ನು ನಿಪಿ 21 ಎಂದು, ಸಾಕ್ಷಿಯ ಸಹಿಯನ್ನು ನಿಪಿ 21 ಎ ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾ ಸಾ 12 ರವರಿಗೆ ಹಸ್ತಾಂತರಿಸಿರುತ್ತೇನೆ.

<u>ಪಾಟೀಸವಾಲು: ಆರೋಪಿಪರ ವಕೀಲರು</u>

ಎಂ.ಎಲ್.ಸಿ ವರದಿಯನ್ನು ಅಂತಿಮವರದಿಯ ದಾಖಲೆಗಳೊಂದಿಗೆ ಹಾಜರುಪಡಿಸಿರುವ ಬಗ್ಗೆ ತಿಳಿದಿರುವುದಿಲ್ಲ. ರಾತ್ರಿ 8.30 ರ ವೇಳೆಗೆ ಘಟನಾ ಸ್ಥಳಕ್ಕೆ ಮಹಜರ್ ಸಲುವಾಗಿ ಹೋಗಿರುತ್ತೇವೆ. ಮಹಜರನ್ನು ಬೀದಿ ದೀಪದ ಬೆಳಕಿನ ಸಹಾಯದಿಂದ ಬರೆದಿರುತ್ತೇವೆ. ಈ ಬಗ್ಗೆ ನಾನು ಮಹಜರ್ ನಲ್ಲಿ ಒಕ್ಕಣೆ ಮಾಡಿರುತ್ತೇನೆ. ಮಹಜರ್ ಸ್ಥಳದಲ್ಲಿ ವೈನ್ ಸ್ಟೋರ್ ಗಳು ಇರುವ ಬಗ್ಗೆ ಕಂಡು ಬಂದಿರುತ್ತದೆ. ಘಟನ ಸ್ಥಳವು ಹೆಚ್ಚು ಜನನಿಬಿಡ ಪ್ರದೇಶ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಮಹಜರ್ ಜರುಗಿಸುವ ಕಾಲಕ್ಕೆ ಸ್ಥಳೀಯರನ್ನು ಪಂಚನಾಮೆಗೆ ಆಹ್ವಾನಿಸಿರುವುದಿಲ್ಲ, ಸ್ಥಳೀಯರ ಯಾರು ಇರಲಿಲ್ಲ. ಸ್ಥಳೀಯರ ಯಾರು ಇರಲಿಲ್ಲ ಎಂದು ಮಹಜರ್ ನಲ್ಲಿ ಒಕ್ಕಣೆ ಮಾಡಿರುವುದಿಲ್ಲ. ಚಾ ಸಾ 2 ಮತ್ತು 3 ರವರಿಗೆ ಮಹಜರ್ ಗೆ ಹಾಜರಾಗಲು ನೋಟೀಸ್ ನೀಡಿರುವುದಿಲ್ಲ. ತನಿಖಾ ಸಹಾಯಕರು ಮಹಜರ್ ನಲ್ಲಿ ನಮೂದಿಸಿರುವ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತಾರೆ. ಕಚ್ಚಾ ನಕ್ಷೆಯಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ಸು ಹಾಗೂ ಕಾರು ಯಾವ ಕಡೆಯಿಂದ ಯಾವ ಕಡೆಗೆ ಚಲಿಸುತ್ತಿತ್ತು ಎಂದು ಉಲ್ಲೇಖವಿರವುದಿಲ್ಲ ಎಂದರೆ ಸರಿ. ಘಟನಾ ಸ್ಥಳದಲ್ಲಿ ಪ್ರತ್ಯಕ್ಷ ಸಾಕ್ಷಿಗಳು ಯಾವ ಸ್ಥಳದಲ್ಲಿದ್ದರು ಎಂಬ ಬಗ್ಗೆ ಕಚ್ಚಾ ನಕ್ಷೆಯಲ್ಲಿ ಉಲ್ಲೇಖವಿರುವುದಿಲ್ಲ. ಅಮಾನತ್ತು ಮಹಜರ್ ವೇಳೆ ನಾನು ಸ್ಥಳದಲ್ಲಿ ವಾಹನಗಳು ಇದ್ದ ಬಗ್ಗೆ ಛಾಯಚಿತ್ರ ತೆಗೆದಿರುವುದಿಲ್ಲ, ತನಿಖಾ ದಾಖಲೆಗೊಂದಿಗೆ ನ್ಯಾ.ಕ್ಕೆ ಸಲ್ಲಿಸಿರುವುದಿಲ್ಲ. ವಾಹನ ತಪಾಸಣಾ ವರದಿ ಪಡೆದುಕೊಳ್ಳಲು ಯಾವ ದಿನಾಂಕ ನಿವೇದಿನೆ ನೀಡಿರುತ್ತೇನೆ ಎಂಬ ಬಗ್ಗೆ ನಿವೇದನೆಯನ್ನು ತನಿಖಾ ದಾಖಲೆಗಳೊಂದಿಗೆ ನ್ಯಾ.ಕ್ಕೆ ನಿವೇದಿಸಿಕೊಂಡಿರುವ ಬಗ್ಗೆ ಸದರಿ

ದಾಖಲೆ ಇಲ್ಲ ಎಂಬ ಬಗ್ಗೆ ತಿಳಿದಿರುವುದಿಲ್ಲ. ಮೈ-ಬೆಂಗಳೂರು ಹೆದ್ದಾರಿಯು ವಾಹನದಟ್ಟಣೆಯಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ, ಸಂಜೆ ಸಮಯದಲ್ಲಿ ಕಡಿಮೆ ವಾಹನ ಸಂಚಾರ ಇರುತ್ತದೆ. ಕಛೇರಿಗಳು ಮತ್ತು ಶಾಲೆಗಳು ಆ ದಿನದ ಕರ್ತವ್ಯದ ಅವಧಿ ಮುಕ್ತಾಯವಾಗುವ ಸಮಯವಾಗಿದ್ದು ಸಾಮಾನ್ಯವಾಗಿ ರಸ್ತೆಯಲ್ಲಿ ವಾಹನದಟ್ಟಣೆ ಇರುತ್ತದೆ ಎಂದರೆ ಸರಿಯಲ್ಲ. ಅಪಘಾತ ಸ್ಥಳ ಎಂದು ಹೇಳಲಾದ ಸ್ಥಳದ ಸ್ವಲ್ಪ ಮುಂಭಾಗದಲ್ಲಿ ಒಂದು ವೇಗನಿರೋಧಕ ಹಂಪ್ಸ್ ಅಳವಡಿಸಲಾಗಿರುತ್ತದೆ ಎಂದರೆ ಸರಿ. ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಕ್ಕೆ ಹೋಗಲು ಬಸ್ ಗಳು ಎಡಭಾಗದಲ್ಲಿ ಚಲಿಸುತ್ತವೆ ಎಂದರೆ ಸರಿ. ದೂರಿನ ಒಕ್ಕಣೆಯಂತೆ ಕಾರು ಡಿವೈಡರ್ ಗೆ ಅಪ್ಪಳಿಸಿರುವ ಬಗ್ಗೆ ಒಕ್ಕಣೆ ಇದ್ದು ಕಾರ್ ನ ಬಲಭಾಗದಲ್ಲಿ ಡಿವೈಡರ್ ಗೆ ಗುದ್ದಿಕೊಂಡ ಬಗ್ಗೆ ಕಾರ್ ಗೆ ಯಾವುದೇ ಜಕಂಗಳಾಗಿಲ್ಲ ಎಂದರೆ ಸರಿ. ಕೆ.ಎಸ್.ಆರ್.ಟಿ.ಸಿ ಬಸ್ ನ ಅಜಾಗರೂಕತೆ ಚಾಲನೆಯಿಂದ ಈ ಅಪಘಾತ ಸಂಭವಿಸಿಲ್ಲ ಎಂದರೆ ಸರಿಯಲ್ಲ. ದೂರುದಾರರು ಸ್ವಯಂ ಮಾಡಿಕೊಂಡ ಅಪಘಾತ ವಿಮಾ ಪರಿಹಾರ ಪಡೆದುಕೊಳ್ಳಲು ಸುಳ್ಳು ದೂರು ನೀಡಿದ್ದು ಪಿರ್ಯಾದುದಾರರಿಗೆ ಅನುಕೂಲವಾಗಲಿ ಎಂದು ಅದರಂತೆ ಪ್ರ.ವ.ವರದಿ ದಾಖಲಿಸಿಕೊಂಡು ಭಾಗಶಃ ತನಿಖೆ ಮಾಡಿ ದೂರಿಗೆ ಅನುಕೂಲವಾಗುವಂತೆ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳ ಮಹಜರ್, ಅಮಾನತ್ತು ಮಹಜರ್ ಹಾಗೂ ಇತರೆ ದಾಖಲೆಗಳನ್ನು ಠಾಣೆಯಲ್ಲಿ ಕುಳಿತು ಅನುಕೂಲವಾಗುವಂತೆ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ಬಸ್ ನಲ್ಲಿ ಪ್ರಯಾಣಿಸುತ್ತಿದ್ದ ಯಾವುದೇ ಪ್ರಯಾಣಿಕರನ್ನು ವಿಚಾರಣೆಗೆ ಒಳಪಡಿಸಿ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಅಪಘಾತದಲ್ಲಿದ್ದ ವೈನ್ ಸ್ಟೋರ್, ಇತರೆ ಅಂಗಡಿ ಮುಗ್ಗಟ್ಟುಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಅಥವಾ ಮಾಲೀಕರ ಹೇಳಿಕೆಯನ್ನು ಪಡೆದುಕೊಂಡಿಲ್ಲ, ವಿಚಾರಣೆಗೆ ಒಳಪಡಿಸಿರುವುದಿಲ್ಲ. ನನ್ನ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ